## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 203

ಸದಸ್ಯರ ಹೆಸರು : ಶ್ರೀ ಟಿ.ಎ. ಶರವಣ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 14.02.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರಿನಲ್ಲಿ ಬಿ.ಎಂ.ಟಿ.ಸಿಯು ಒಟ್ಟು ವಾಣಿಜ್ಯ ಮಳಿಗೆಗಳನ್ನು ಹೊಂದಿದ: ಈ ಮಳಿಗೆಗಳಿಂದ ವಾರ್ಷಿಕವಾಗಿ ಎಷ್ಟು ಆದಾಯ ಬರುತ್ತದೆ: (ವಿಭಾಗವಾರು ಮಾಹಿತಿ ನೀಡುವುದು) | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಟ್ಟು 425 ವಾಣಿಜ್ಯ ಮಳಿಗೆಗಳನ್ನು ಹೊಂದಿದೆ.<br>ಈ ಮಳಿಗೆಗಳಿಂದ 2023-24ನೇ ಸಾಲಿನಲ್ಲಿ (ಡಿಸೆಂಬರ್-2023ವರೆಗೆ) ಒಟ್ಟು ರೂ.85,17,55,738/- ವಾಣಿಜ್ಯ ಆದಾಯ ಬರುತ್ತದೆ.<br>ಡಿಸೆಂಬರ್-2023ರ ಮಾಹೆಯ ವಿಭಾಗವಾರು ವಾಣಿಜ್ಯ ಆದಾಯದ ಮಾಹಿತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ. | ಮಳಿಗೆಗಳನ್ನು ಯಾವ ಯಾವ ಆಧಾರದ ಮೇಲೆ ಬಾಡಿಗೆ ನೀಡಲಾಗುತ್ತದೆ: ಮಾರ್ಚ್ 2022 ರಿಂದ ಇಲ್ಲಿಯವರೆಗೆ ಎಷ್ಟು ಮಳಿಗೆಗಳನ್ನು ಬಾಡಿಗೆ ನೀಡಲಾಗಿದೆ. ಅವುಗಳಿಂದ ಬಂದ ಆದಾಯವೆಷ್ಟು: | ಸಂಸ್ಥೆಯು ಸರ್ಕಾರಿ ಕಛೇರಿಗಳನ್ನು ಹೊರತುಪಡಿಸಿ ಉಳಿದ ವಾಣಿಜ್ಯ ಮಳಿಗೆಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗುತ್ತಿದೆ.<br>ಮಾರ್ಚ್-2022ರಿಂದ ಡಿಸೆಂಬರ್-2023ರವರೆಗೆ ಒಟ್ಟು 56 ಮಳಿಗೆಗಳನ್ನು ಹಂಚಿಕೆ ಮಾಡಲಾಗಿದೆ.<br>2023-24ನೇ ಸಾಲಿನಲ್ಲಿ (ಡಿಸೆಂಬರ್-2023ರವರೆಗೆ) ರೂ.85,17,55,738/-ಗಳಷ್ಟು ವಾಣಿಜ್ಯ ಆದಾಯ ಬಂದಿದೆ. |
| ಇ. | BMTC ಯಲ್ಲಿ Credit Note ನ್ನು ಯಾವ ಉದ್ದೇಶಗಳಿಗೆ ಸೃಷ್ಟಿಸಲಾಗುತ್ತದೆ: | ವಾಣಿಜ್ಯ ಶಾಖೆಯಲ್ಲಿ ಪರವಾನಗಿದಾರರಿಗೆ ನೀಡಲಾಗಿರುವ Invoiceಗಳಲ್ಲಿನ ಮೊತ್ತದಲ್ಲಿ ಬದಲಾವಣೆ (ಕಡಿಮೆ ಮಾಡುವ ಸಂದರ್ಭದಲ್ಲಿ) ಮಾಡುವ ಅವಶ್ಯಕತೆ ಕಂಡುಬಂದಲ್ಲಿ Credit Noteಗಳನ್ನು ಸೃಷ್ಟಿಸಲಾಗುತ್ತದೆ. |
| ಈ. | Credit Note ಆಧಾರದ ಮೇಲೆ ವಂಚನೆ ಕೇಸ್ ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಪ್ರಕರಣದಲ್ಲಿ | ಸರ್ಕಾರದ ಗಮನಕ್ಕೆ ಬಂದಿದೆ.<br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಶ್ರೀ ಅಬ್ದುಲ್ ಖದ್ದೂಸ್, ಮುಖ್ಯ ಲೆಕ್ಕಾಧಿಕಾರಿ |

| | | |
|---|---|---|
| | ಭಾಗಿಯಾಗಿದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮದ ವಿವರ ನೀಡುವುದು? | ಹಾಗೂ ಆರ್ಥಿಕ ಸಲಹೆಗಾರರು ಮತ್ತು ಸಂಸ್ಥೆಗೆ ನಷ್ಟ ಉಂಟುಮಾಡಿರುವ ಇತರೆ ಸಂಚಾರ (ವಾಣಿಜ್ಯ) ಮತ್ತು ಲೆಕ್ಕಪತ್ರ ಶಾಖೆಯ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ:0022/2024, ದಿನಾಂಕ:02.02.2024ನ್ನು ದಾಖಲಿಸಲಾಗಿದೆ ಹಾಗೂ ಶ್ರೀ ಅಬ್ದುಲ್ ಖದ್ದೂಸ್ ಮತ್ತು ಶ್ರೀಮತಿ ಅನಿತಾ ಟಿ., ಸಹಾಯಕ ಸಂಚಾರ ಅಧೀಕ್ಷಕಿ, ಘಟಕ-15, ಪೂರ್ವ ವಲಯ ಇವರನ್ನು ವಿಚಾರಣಾ ಇತ್ಯರ್ಥಪೂರ್ವ ಅಮಾನತ್ತುಗೊಳಿಸಲಾಗಿದೆ.<br><br>ಮುಂದುವರೆದು, ಪ್ರಕರಣವು ತನಿಖಾ ಹಂತದಲ್ಲಿದ್ದು, ಸದರಿ ಪ್ರಕರಣದಲ್ಲಿ ಭಾಗಿಯಾಗಿರಬಹುದಾದ ಉಳಿದ ಅಧಿಕಾರಿ/ಸಿಬ್ಬಂದಿಗಳನ್ನು ಪತ್ತೆ ಮಾಡುವ ಕಾರ್ಯವು ಪ್ರಗತಿಯಲ್ಲಿದ್ದು, ಆರೋಪ ಸಾಬೀತಾದವರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 03 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-ಅ

## ಡಿಸೆಂಬರ್-2023 ರ ಮಾಹೆಯ ವಿಭಾಗವಾರು ವಾಣಿಜ್ಯ ಆದಾಯದ ವಿವರ

| ಕ್ರಸಂ | ವಿಭಾಗ | ಮಾಸಿಕ ಆದಾಯ (ರೂ. ಗಳಲ್ಲಿ) |
|---|---|---|
| 1 | ದಕ್ಷಿಣ | 3,43,39,907.00 |
| 2 | ಪೂರ್ವ | 1,30,25,628.00 |
| 3 | ಈಶಾನ್ಯ | 21,06,474.00 |
| 4 | ಉತ್ತರ | 92,39,542.00 |
| 5 | ಕೇಂದ್ರೀಯ | 69,90,619.00 |
| 6 | ಪಶ್ಚಿಮ | 76,07,050.00 |
| 7 | ವಾಯುವ್ಯ | 9,63,887.00 |
| 9 | ಇತರೆ | 1,37,97,792.00 |
| | ಒಟ್ಟು | **8,80,70,899.00** |

ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ).
ಬೆಂ.ಮ.ಸಾ.ಸಂಸ್ಥೆ

Scanned with OKEN Scanne